ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**642**
ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	22.02.2022
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಕೃಷ್ಣರಾಜಸಾಗರ ಜಲಾಶಯದ ಸುತ್ತಲೂ ಗಣಿಗಾರಿಕೆಗೆ ನಿರ್ಬಂಧ ಹೇರಲಾಗಿದೆಯೇ:	ಈ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ. ದಿನಾಂಕ 17.10.2011 ರಂದು ಅಧ್ಯಕ್ಷರು, ಕಾಡಾ ಕಾವೇರಿ ನೀರಾವರಿ ಯೋಜನೆ, ಮೈಸೂರು ಇವರೊಂದಿಗೆ ನಡೆದ ಸಭೆಯ ನಿರ್ಣಯದ ಮೇರೆಗೆ ಕೆ.ಆರ್.ಎಸ್. ಅಣೆಕಟ್ಟೆಯ North Bank ನಿಂದ 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಈ ದಿನಾಂಕಕ್ಕಿಂತ ಮುಂಚಿತವಾಗಿ ಮಂಜೂರು ಮಾಡಲಾಗಿದ್ದ, 08 ಕಲ್ಲುಗಣಿ ಗುತ್ತಿಗೆಗಳನ್ನು ರದ್ದುಪಡಿಸಿ, ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿತ್ತು.
(ಆ)	ಹಾಗಾದಲ್ಲಿ ಈ ಸಂಬಂಧ ತಜ್ಞರ ವರದಿಯನ್ನು ಪಡೆಯಲಾಗಿದೆಯೇ:	ಕೆಆರ್ಎಸ್ ಅಣೆಕಟ್ಟೆಯ ಸುರಕ್ಷತೆ ಸಂಬಂಧ ಎಷ್ಟು ವಿಸ್ತೀರ್ಣದಲ್ಲಿ ಕ್ರಷರ್ / ಗಣಿಗಾರಿಕೆ ನಡೆಸಬಾರದೆಂದು ನಿಯಮ ರೂಪಿಸುವ ಕುರಿತು ಯಾವುದೇ ತಜ್ಞರ ಸಮಿತಿಯನ್ನು ರಚಿಸಲಾಗಿರುವುದಿಲ್ಲ. ಆದರೆ, ಕೇಂದ್ರ ಜಲ ಆಯೋಗ, ನವದೆಹಲಿ ರವರು 10 ವರ್ಷಗಳಿಗೊಮ್ಮೆ 10 ಮೀ. ಗಿಂತ ಎತ್ತರವಿರುವ ಅಥವಾ 60 ಮಿಲಿಯನ್ ಘನ ಮೀಟರ್‌ಗಿಂತ ಹೆಚ್ಚು ನೀರು ಶೇಖರಣಾ ಸಾಮರ್ಥ್ಯ ಹೊಂದಿರುವ ಅಣೆಕಟ್ಟುಗಳ ಸುರಕ್ಷತಾ ಪರಿಶೀಲನೆಗಾಗಿ ಅಂದರೆ ಕೆಆರ್ಎಸ್ ಅಣೆಕಟ್ಟು ಒಳಗೊಂಡಂತೆ ರಾಜ್ಯದಲ್ಲಿನ ಎಲ್ಲಾ ಭಾರಿ ಅಣೆಕಟ್ಟುಗಳ ಸುರಕ್ಷತಾ ಪರಿಶೀಲನಾ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ ID/55/CDM/99(p-1), ದಿನಾಂಕ 13.09.2000 ರನ್ವಯ, ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ (Dam Safety Review Pancl (DSRP) ಎಂಬ ತಜ್ಞರ ಸಮಿತಿಯನ್ನು ರಚಿಸಲಾಗಿರುತ್ತದೆ.

ತದನಂತರ ಹಲವು ಬಾರಿ ಸದರಿ ಸಮಿತಿಯನ್ನು ಪುನರ್ ರಚಿಸಲಾಗಿದ್ದು, ಇತ್ತೀಚಿಗೆ ಸದರಿ DSRP ತಜ್ಞರ ಸಮಿತಿಯನ್ನು ಕೇಂದ್ರ ಜಲ ಆಯೋಗದ "ಅಣೆಕಟ್ಟು ಸುರಕ್ಷತಾ ಪರಿಶೀಲನಾ ಮಾರ್ಗಸೂಚಿಗಳು, 2018" ರ ಅನುಸಾರ ಪುನಃ ಪುನರ್ ರಚಿಸಲಾಗಿರುತ್ತದೆ.

ದಿನಾಂಕ 20.09.2018 ರಂದು ಕೃಷ್ಣರಾಜಸಾಗರ ಅಣೆಕಟ್ಟೆಯ ಪ್ರದೇಶದಲ್ಲಿ ಭಾರಿ ಶಬ್ದ ಉಂಟಾಗಿದ್ದರಿಂದ, ಈ ಕುರಿತು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮತ್ತು ನಿರ್ವಹಣಾ ಘಟಕ (Karnataka State Natural Disaster Monitoring Centre (KSNDMC) ಇವರನ್ನು ಪರಿಶೀಲಿಸಿ ಮಾಹಿತಿ ನೀಡಲು ಕೋರಿದ್ದರ ಮೇರೆಗೆ KSNDMC ರವರು ಕೆ.ಆರ್.ಎಸ್ ಅಣೆಕಟ್ಟೆ ಬಳಿ ಸ್ಥಾಪಿಸಿರುವ ಶಾಶ್ವತ ಭೂ ಕಂಪನ ಮಾಪನ ಕೇಂದ್ರದಿಂದ 10.5 ಕಿ.ಮೀ. Radial distance ಹಾಗೂ ಬೇಬಿಬೆಟ್ಟದ ಕಾವಲು ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದ ಬ್ಲಾಸ್ಟಿಂಗ್ ಸಾಮಗ್ರಿಗಳನ್ನು ಬಳಸಿ ಬ್ಲಾಸ್ಟಿಂಗ್ ಮಾಡಲಾಗಿರುವುದರಿಂದ ಭಾರಿ ಶಬ್ದ ಉಂಟಾಗಿರುವುದಾಗಿ ಮತ್ತು ಭೂಕಂಪನ ಮಾಪನ ಕೇಂದ್ರದಲ್ಲಿ ಎರಡು ಕ್ವಾರಿ ಬ್ಲಾಸ್ಟ್ ಕಂಪನಿಗಳು ದಾಖಲೆಗೊಂಡಿರುವುದಾಗಿ ವರದಿ ನೀಡಿರುತ್ತಾರೆ.

ಮುಂದುವರೆದು, ಕೆಆರ್‌ಎಸ್ ಅಣೆಕಟ್ಟೆಯ ಸುರಕ್ಷತೆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಕೋರಿದ್ದರ ಮೇರೆಗೆ ಪರಿಣಿತ ಸಂಸ್ಥೆಗಳಾದ National Institute of Rock Mechanics (NIRM) ಇವರು ಹಾಗೂ Central Water & Power Research Station (CWPRS) ಪುಣೆ ರವರು ಕ್ರಮವಾಗಿ ದಿನಾಂಕ 19.12.2018 ಮತ್ತು ದಿನಾಂಕ 11.01.2019 ರಂದು ಕೆ.ಆರ್.ಸಾಗರ ಅಣೆಕಟ್ಟೆಯ ಸುತ್ತಮುತ್ತಲಿನ ಕಲ್ಲುಗಣಿಗಾರಿಕೆ ಕೇಂದ್ರಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಕಲ್ಲು ಗಣಿಗಾರಿಕೆಯಿಂದ ಆಗಬಹುದಾದ ಅಡ್ಡ ಪರಿಣಾಮಗಳನ್ನು ಅರಿಯಲು ಟ್ರಯಲ್ ಬ್ಲಾಸ್ಟಿಂಗ್ ನಡೆಸಿ ಹೆಚ್ಚುವರಿ ಅಧ್ಯಯನ ಕೈಗೊಳ್ಳುವ ಅವಶ್ಯವಿರುತ್ತದೆಂದು ತಿಳಿಸಿರುತ್ತಾರೆ.

ಆದರೆ ಸ್ಥಳೀಯ ಪ್ರತಿಭಟನೆ ಹಿನ್ನಲೆಯಲ್ಲಿ ಟ್ರಯಲ್ ಬ್ಲಾಸ್ಟಿಂಗ್ ಸ್ಥಗಿತಗೊಳಿಸಿ, ಸದರಿ ವಿಷಯದ ಕುರಿತು ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿ ಹಾಗೂ Dam Safety Review Panel ನ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

ಈ ಬಗ್ಗೆ Dam Safety Review Panel ನ ವರದಿಯು ಕೆಳಕಂಡಂತಿದೆ:

All mining activity in a radius of about 25 kms around the dam site be banned until expert opinion is obtained through CWPRS or NIRM after proper on ground tests.

Evolve specification for safe blasting in consultation with NIRM that has a record of proven expertise on this subject.

- A comprehensive study being undertaken by CWPRS, Pune as part of investigation be allowed to be carried to obtain recommendations for regulation of blasting activities taking place surrounding KRS Dam.

DSRP ರವರ ಅಭಿಪ್ರಾಯದಂತೆ Central Water & Power Research Station (CWPRS) ಪುಣೆ ರವರನ್ನು ಸಂಪರ್ಕಿಸಲಾಗಿ, ಸದರಿಯವರು ಈ ಕೆಳಕಂಡಂತೆ ಅಭಿಪ್ರಾಯಿಸಿರುತ್ತಾರೆ.

- To Assess the structural stability of the dam through 2D/3D stress analysis by FEM of the existing dam by considering in situ physical properties of the Dam masonry and its foundation as well as earthquake force as per latest BIS Guidelines (IS:6512-1984, IS:1893-2016 part 1, IS:1893-1984)
- Report on tomography of the dam body for qualitative assessment of dam masonry.

ನಿಗಮದ ತಾಂತ್ರಿಕ ಉಪ ಸಮಿತಿಯ ಅಭಿಪ್ರಾಯ:

ನಿಗಮದ ತಾಂತ್ರಿಕ ಉಪ ಸಮಿತಿಯ 111ನೇ ಸಭೆಯಲ್ಲಿ CSIR-CIMFR ರವರಿಂದ Trial Blast ಅಧ್ಯಯನ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

ದಿನಾಂಕ 22.07.2021 ರಂದು ನಡೆದ ನಿಗಮದ ಮಂಡಳಿಯ 73ನೇ ಸಭೆಯಲ್ಲಿ ಕೃಷ್ಣರಾಜಸಾಗರ ಅಣೆಕಟ್ಟೆಯ ಸದ್ಯಕ್ಕೆ ಕೆಆರ್‌ಎಸ್ ಅಣೆಕಟ್ಟೆಯ ವ್ಯಾಪ್ತಿಯಲ್ಲಿ ಪ್ರಾಯೋಗಿಕ ಬ್ಲಾಸ್ಟಿಂಗ್ ಪ್ರಸ್ತಾವನೆಯನ್ನು ಮುಂದೂಡಿಸಿದ್ದು, Tomography ಮತ್ತು Geophysical ಅಧ್ಯಯನವನ್ನು ಮಾತ್ರ ಕೈಗೊಳ್ಳುವಂತೆ ಅನುಮೋದನೆ ನೀಡಿರುತ್ತದೆ.

ದಿನಾಂಕ 10.08.2021 ರಂದು ಅಣೆಕಟ್ಟೆಯ Tomography of dam & geophysical ಅಧ್ಯಯನ ಕಾರ್ಯವನ್ನು ತುರ್ತು ಕಾಮಗಾರಿ ಎಂದು ಘೋಷಿಸಲಾಗಿದೆ. ಅದರನ್ವಯ, ಕೆಆರ್ ಎಸ್ ಅಣೆಕಟ್ಟೆಯ Tomography of dam body & geophysical ಅಧ್ಯಯನವನ್ನು ಕೈಗೊಳ್ಳಲು M/s PARSAN Overseas Pvt. Ltd ಇವರಿಗೆ ವಹಿಸಲಾಗಿ, ದಿನಾಂಕ 30.10.2021 ರಂದು ಅಧ್ಯಯನವು ಪೂರ್ಣಗೊಂಡಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

(ಇ)	ಸದರಿ ವರದಿಯಂತೆ ಎಷ್ಟು ಕಿ.ಮೀ ವಿಸ್ತೀರ್ಣದ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ.	ಉಪ ಪ್ರಶ್ನೆ (ಆ) ಉತ್ತರದಿಂದಾಗಿ ಉದ್ಭವಿಸುವುದಿಲ್ಲ.
(ಈ)	ಇದೇ ರೀತಿಯಲ್ಲಿ ರಾಜ್ಯದಲ್ಲಿರುವ ಇತರೆ ಜಲಾಶಯಗಳ ಸುತ್ತಲೂ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆಯೇ:	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 6(2) ರಂತೆ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸುವ ಸಂದರ್ಭದಲ್ಲಿ ಸಾರ್ವಜನಿಕ ರಚನೆಗಳಾದ ರಸ್ತೆ, ಶಾಲೆ, ದೇವಸ್ಥಾನ, ರೈಲ್ವೆಲೈನ್ ಹಾಗೂ ಕೆರೆ, ಕಟ್ಟಡಗಳ ಗಡಿಯಿಂದ 200 ಮೀಟರ್ ಅಂತರವನ್ನು ಕಾಯ್ದಿರಿಸಿಕೊಂಡು ಹಾಗೂ ಸ್ಫೋಟಕ ಬಳಸದಂತೆ ಗಣಿಗಾರಿಕೆ ನಡೆಸುವ ಪ್ರಕರಣಗಳಲ್ಲಿ ಸದರಿ ಸಾರ್ವಜನಿಕ ರಚನೆಗಳಿಂದ 50 ಮೀಟರ್ ಅಂತರವನ್ನು ಕಾಯ್ದಿರಿಸಿಕೊಂಡು ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರಾತಿ ನೀಡಲಾಗುತ್ತಿದೆ. ಕರ್ನಾಟಕ ನೀರಾವರಿ ಕಾಯ್ದೆ 1965ರ ಕಲಂ 49 ರಂತೆ ನೀರಾವರಿ ರಚನೆಯಿಂದ 01 ಕಿಲೋಮೀಟರ್ ಅಂತರದ ವ್ಯಾಪ್ತಿಯಲ್ಲಿ, ನೀರಾವರಿ ಇಲಾಖೆ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ಸ್ಫೋಟಕಗಳನ್ನು ಉಪಯೋಗಿಸಿ ಗಣಿಗಾರಿಕೆ ಅಥವಾ ಕಲ್ಲುಗಣಿ ಕಾರ್ಯಾಚರಣೆಯನ್ನು ನಡೆಸತಕ್ಕದ್ದಲ್ಲ. ಅಣೆಕಟ್ಟೆಯ ಸುರಕ್ಷತೆ ಸಂಬಂಧ ಇಂತಿಷ್ಟೆ ದೂರದಲ್ಲಿ ಗಣಿಗಾರಿಕೆ ನಡೆಸಲು ನಿರ್ಬಂಧಿಸಿರುವ ಸಂಬಂಧ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ.
(ಉ)	ಹಾಗಿಲ್ಲದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಉಳಿದ ಜಲಾಶಯಗಳ ಸಂರಕ್ಷಣೆಗೆ ಸುತ್ತಲಿನ ಪ್ರದೇಶಗಳಲ್ಲಿ ನಿಷೇಧಿಸಲಾಗುವುದು?	ಉಪ ಪ್ರಶ್ನೆ (ಈ) ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಸಂಖ್ಯೆ ಸಿಐ-ಎಂಎಂಎನ್ /48/2022

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.